B.B.M.P

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ ಬೆಂಗಳೂರು.

ಸಂಖ್ಯೆ: ಸ.ಅ/ವಾ-20/ಪಿ.ಆರ್/22/2021-22 ದಿನಾಂಕ:26.11.2021

<u>ವಾರ್ಡ್ ಸಮಿತಿ ಸಭೆಯ ನಡುವಳಿಕೆಗಳು</u>

ವಿಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ. ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/25/2020-21 ದಿನಾಂಕ: 21-09-2020 ರವರ ಆದೇಶದಂತೆ ದಿನಾಂಕ: 26-11-2021 ರಂದು ವಾರ್ಡ್ ನಂ. 20 ಗಂಗಾನಗರ, ವಾರ್ಡ್ ಕಛೇರಿಯಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು.

### ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಬಿ.ಎಸ್. ಪ್ರಹ್ಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ರಾಮರಾವ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ.20 |
| 3. | ಶ್ರೀ.ಕೆ. ಸತ್ಯನಾರಾಯಣ | ಟ್ರಾಫಿಕ್ ಪೋಲೀಸ್ |
| 4. | ಡಾ.ನವನೀಶ್ | ಮೆಡಿಕಲ್ ಆಫಿಸರ್ ವಾರ್ಡ್ 20 |
| 5 | ಶ್ರೀ.ಜೀವನ್ ಗೌಡ | ಜೂನಿಯರ್ ಹೆಲ್ತ್ ಇನ್ಸ್ಪೆಕರ್ |
| 6. | ಶ್ರೀ.ಬಸವರಾಜ್ | ವಾರ್ಡ್ ಮಾರ್ಷಲ್ |
| 7. | ಶ್ರೀಮತಿ ಸುವರ್ಣ ದೇವಿ | ಬಿ.ಡಬ್ಲ್ಯ.ಎಸ್.ಎಸ್.ಬಿ |
| 8. | ಶ್ರೀಮತಿ ಶಾಹಿದ | ಹಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ.ಎಂ.ಆರ್.ಪ್ರಸಾದ್ | ಸಾರ್ವಜನಿಕರು |
| 10. | ಶ್ರೀಮತಿ.ಶಾಲಿನಿ ದೇಶಪಾಂಡೆ | ಸಾರ್ವಜನಿಕರು |
| 11. | ಶ್ರೀ.ಕೆ.ಶೀನಿವಾಸ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ರಾಮರಾವ್ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳ ಶ್ರೀ ಬಿ.ಎಸ್.ಪ್ರಲ್ಹಾದ್ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1) ಹೆಚ್.ಎಂ.ಟಿ. ಬಡಾವಣೆಯಲ್ಲಿರುವ ಪ್ರೆಸಿಡೆನ್ಸಿ ಆಟದ ಮೈದಾನವದಲ್ಲಿರುವ ವಾಚ್ ಮ್ಯಾನ್ ಶೆಡ್ಡನ್ನು ದಿನಾಂಕ 15.12.2021 ರಂದು ಒಪಿನಿಂಗ್ ಮಾಡುಬೇಕೆಂಬುವುದರ ವಿಷಯದ ಕುರಿತು ಚರ್ಚೆ ಮಾಡಲಾಯಿತು.

2) ಆರ್.ಟಿ.ನಗರ ಮುಖ್ಯ ರಸ್ತೆಯ ಪುಟ್ ಪಾತ್ ಮೇಲೆ ಹಾಕಿರುವ ಪಿಕಲಿ ಬಲೂನು ಮಾರಟಗಾರರನ್ನು ಪುಟ್ ಪಾತ್ ಮೇಲಿಂದ ತೆರವುಗೊಳಿಸಬೇಕೆಂದು ಚರ್ಚೆ ಮಾಡಲಾಯಿತು.

3) ವಾರ್ಡ್ ನಲ್ಲಿ ಏರ್ಟೆಲ್ ಒ ಎಫ್ ಸಿ ಅಗೆದಿರುವ ಗುಂಡಿಗಳನ್ನು ಈಗಾಗಲೆ ಮುಚ್ಚಿಸುವ ಕಾರ್ಯ ಮಾಡುತ್ತಿದ್ದಾರೆ ಆದರೂ ಕೂಡ ಈ ಕಾರ್ಯವನ್ನು ಅತೀ ವೇಗವಾಗಿ ಮತ್ತು ಸ್ವಚ್ಛವಾಗಿ ಬೇಗನೆ ಕಾರ್ಯಮಾಡಿ ಮುಗಿಸುವ ವಿಷಯವನ್ನು ಚರ್ಚೆ ಮಾಡಲಾಯಿತು.

4) 108 ಬಸ್ ನಿಲ್ದಾನದಲ್ಲಿ ಕಾರ್ ಮತ್ತು ಮೋಟರ್ ಸೈಕೇಲ್ ವಾಹನಗಳನ್ನು ನಿಲ್ಲಿಸಿರುವುದನ್ನು ಟ್ರಾಫಿಕ್ ಪೋಲೀಸ್ ನವರು ಅವನ್ನು ತೆರವುಗೊಳಿಸಬೇಕೆಂದು ಚರ್ಚೆ ಮಾಡಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕುಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು | ಅಧ್ಯಕ್ಷರು |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿಗಳು |
| ವಾರ್ಡ್ ನಂ.20, ಗಂಗಾನಗರ | ವಾರ್ಡ್ ನಂ.20, ಗಂಗಾನಗರ |

26/10/2024

ಪ್ರತಿಯನ್ನು:-

1) ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3) ಮಾನ್ಯ ಜಂಟೀ ಆಯುಕ್ತರು ( ಆರೋಗ್ಯ/ಎಸ್ ಡಬ್ಲ್ಯ್ ಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ಅವಗಾಹನೆಗೆ ಸಲ್ಲಿಸಿದೆ.
5) ವಾರ್ಡ್ ಸಮಿತಿಯ ಅಧ್ಯಕ್ಷ ಮಾಹಿತಿಗಾಗಿ ಕಳುಹಿಸಿದೆ.
6) ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯ ಪಾಲಕ ಅಭಿಯಂತರರು, ಬಿ.ಡಬ್ಲ್ಯ್.ಎಸ್.ಎಸ್.ಬಿ ರವರ ಅವಗಾಹನೆಗೆ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
9) ಸಹಾಯಕ ಅಭಿಯಂತರರು (ವಿದ್ಯುತ್/ ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10) ಕಛೇರಿ ಕಡತಕ್ಕೆ.